# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 314/2015 ಸಿಡಬ್ಲ್ಯೂ: 9 ಪಿಡಬ್ಲ್ಯೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 02-07-2025

ಹೆಸರು : ಲಕ್ಷ್ಮಪ್ಪ

ತಂದೆ ಹೆಸರು : ಸಾಬಣ್ಣ

ವಯಸ್ಸು : 50 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಬಿಳಕಲ್ಲು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿತರು ನನಗೆ ಪರಿಚಯ. 1ನೇ ಆರೋಪಿತನು ನನಗೆ ಪರಿಚಯ. ನಾನು ಇಳಕಲ್ಲು ಗ್ರಾಮದಲ್ಲಿರುವ ಶಾಲೆಯ ಎಸ್ ಡಿ ಎಂ ಸಿ ಸದಸ್ಯನಾಗಿದ್ದು. ಆ ಅವಧಿಯಲ್ಲಿ 2 ನೇ ಆರೋಪಿತನು ಎಸ್ ಡಿ ಎಂ ಸಿ ಅಧ್ಯಕ್ಷನಾಗಿದ್ದನು. ನಮ್ಮ ಶಾಲೆಗೆ 11 ಲಕ್ಷ ರೂಪಾಯಿ ಕಟ್ಟಡ ನಿರ್ಮಿಸಲು ಮಂಜೂರಾಗಿದ್ದು. ಆಗ ಆರೋಪಿತರು ಅರ್ದ ಕಟ್ಟಡವನ್ನು ಕಟ್ಟಿ ಇನ್ನೂಳಿದ ಹಣವನ್ನು ಆರೋಪಿತರು ಖಾಲಿ ಮಾಡಿದ್ದಾರೆ. ನಾನು ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ಸುಮಾರು 4 ಲಕ್ಷ ರೂಪಾಯಿಗಳು ಮಾತ್ರ ಕೆಲಸವನ್ನು ಮಾಡಿ ಉಳಿದ ಹಣವನ್ನು ಖಾಲಿ ಮಾಡಿದ್ದಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ಪೊಲೀಸರು ಯಾವದಿನಾಂಕದಂದು ಹೇಳಿಕೆ ಪಡೆದುಕೊಂಡಿದ್ದಾರೆ ಎಂಬುದರ ಕುರಿತು ನನಗೆ ಹೇಳಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. 11 ಲಕ್ಷ ರೂಪಾಯಿ ಮಂಜೂರಾತಿ ಯ ಬಗ್ಗೆ ನಾನು ದಾಖಲಾತಿಯನ್ನು ನೋಡಿಲ್ಲ. ಶಾಲೆಯ ಕಟ್ಟಡ ಚತ್ತಿನ ವರೆಗೂ ಪೂರ್ಣ ಗೊಂಡಿದೆ ಸಾಕ್ಷಿಯು ಮುಂದುವರೆದು ಚತ್ತು ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸರ್ಕಾರದ ಕಡೆಯಿಂದ ಮಂಜೂರಾತಿಯಾಗಿರುವ ಕೋಣೆಗಳು ಆರೋಪಿತರು ಕಟ್ಟಿದ್ದರು. ನನಗೆ ವೈಯಕ್ತಿಕವಾಗಿ ಮಂಜೂರಾತಿ ಆಗಿರುವ ಬಗ್ಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ಎಲ್ಲಾ ಕಡೆ ತಿರುಗಾಡುತ್ತಿರುವುದರಿಂದ ಗೊತ್ತಾಗಿದೆ ಎಂದು ನುಡಿಯುತ್ತಾರೆ. ಆರೋಪಿತರು

ಹೇಗೆ ಹಣವನ್ನು ಪಡೆದುಕೊಂಡಿರುತ್ತಾರೆ ನಾನು ನೋಡಿಲ್ಲ. ಸದರಿ ಹಣವನ್ನು ಯಾರು ಪಡೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಅಧ್ಯಕ್ಷರು ಮತ್ತು ಮುಖ್ಯೋಪಾಧ್ಯಯರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ಎಸ್ ಡಿ ಎಂ ಸಿ ಸದಸ್ಯನಾಗಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಎಸ್ ಡಿ ಎಂ ಸಿ ಸದಸ್ಯನಾಗಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಚಾ ಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**